## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2022-23ನೇ ಸಾಲಿನಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಯಂತೋಪಕರಣಗಳು ಹಾಗೂ ಸಾಧನ ಸಾಮಾಗ್ರಿಗಳನ್ನು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1.ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರು ಪತ್ರ ಸಂಖ್ಯೆ:ಸ.ಶಿ.ಕ/ಕೆ.ಪಿ.ಎಸ್/ಆ ಘೋ ಮು.ಕಾ.ಕ್ರಿ ಯಾ /2022-23, ದಿನಾಂಕ:30.06.2022.

2.ಸರ್ಕಾರದ ಆದೇಶ ಸಂಖ್ಯೆ: ಇಪಿ 35 ಎಂಪಿಇ 2022, ದಿನಾಂಕ:06.08.2022.

3.ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರು ಪತ್ರ ಸಂಖ್ಯೆ:191, ಸ.ಶಿ.ಕ/ಕೆ.ಪಿ.ಎಸ್/ಆ ಘೋ ಮು.ಕಾ.ಕ್ರಿ ಯಾ /2022-23, ದಿನಾಂಕ:20.10.2022.

ಪ್ರಸ್ತಾವನೆ:

ಓದಲಾದ (1)ರ ಪತ್ರದಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು, ಇವರ ಪತ್ರದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಇವರು ಸಲ್ಲಿಸಿರುವ ಮಾಹಿತಿಯನ್ನು ಆಧರಿಸಿ ಮೂಲಭೂತ ಸೌಕರ್ಯಗಳನ್ನು ಮತ್ತು ಸಾಧನ ಸಾಮಗ್ರಿಗಳು ಹಾಗೂ ಯಂತ್ರೋಪಕರಣಗಳು ಅಗತ್ಯವಿರುವ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆಯ್ಕೆ ಮಾಡಿ ಸಿದ್ಧಪಡಿಸಲಾಗಿರುವ ಕ್ರಿಯಾ ಯೋಜನೆಯಂತೆ ಅನುದಾನ ವೆಚ್ಚ ಮಾಡಲು ಅನುಮೋದನೆ ನೀಡುವಂತೆ ಕೋರಲಾಗಿತ್ತು.

ಓದಲಾದ (2)ರ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಕ್ಕಾಗಿ ಲೆಕ್ಕ ಶೀರ್ಷಿಕೆ: 4202-01-201-1-06ಯ ಉಪ ಶೀರ್ಷಿಕೆ:139( ಪ್ರಧಾನ ಕಾಮಗಾರಿಗಳು) ಅಡಿಯಲ್ಲಿ ಒದಗಿಸಲಾದ ರೂ.7000.00 ಲಕ್ಷಗಳು ಮತ್ತು ಗಣಕ ಯಂತ್ರಗಳು, ಮತ್ತು ಇನ್ನಿತರ ಸಾಮಾಗ್ರಿಗಳ ಸರಬರಾಜಗಾಗಿ ಉಪ ಶೀರ್ಷಿಕೆ: 180 (ಯಂತ್ರೋಪಕರಣಗಳು ಮತ್ತು ಸಾಧನ ಸಾಮಾಗ್ರಿಗಳು) ಅಡಿಯಲ್ಲಿ ಒದಗಿಸಲಾದ ರೂ. 1500.00 ಲಕ್ಷಗಳು ಒಳಗೊಂಡಂತೆ ಒಟ್ಟಾರೆಯಾಗಿ ರೂ. 8500.00 ಲಕ್ಷಗಳ ಕ್ರಿಯಾ ಯೋಜನೆಗೆ ಕೆಲವು ಷರತ್ತುಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಲಾಗಿತ್ತು.

ಓದಲಾದ (3)ರ ಪತ್ರದಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು, ಇವರು ದಿನಾಂಕ 14.10.2022 ರಂದು ನಡೆದ ತಾಂತ್ರಿಕ ಸಲಹಾ ಸಮಿತಿಯ (T.A.P) ನಿರ್ಣಯದಂತೆ All in Computers ಬದಲಿಗೆ Mini PC's, Projectors ಬದಲಿಗೆ LED Projectors ನೀಡುವಂತೆ ತೀರ್ಮಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ 281 ಕೆ.ಪಿ.ಎಸ್ ಶಾಲೆಗಳಲ್ಲಿ 247 ಶಾಲೆಗಳಿಗೆ ರೂ.0.63 ಲಕ್ಷ ಘಟಕ ವೆಚ್ಚದಲ್ಲಿ LED Projectors ಗಳನ್ನು, ಪ್ರತಿ ಜಿಲ್ಲೆಯ ಒಂದು ಅಯ್ದ ಉತ್ತಮ ಶಾಲೆಗೆ ರೂ.1.50 ಘಟಕ ವೆಚ್ಚದಲ್ಲಿ Interactive Panel Board ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿ, ಸರ್ಕಾರದ ಆದೇಶ ಸಂಖ್ಯೆ: ಇಪಿ 35 ಎಂಪಿಇ 2022, ದಿನಾಂಕ:06.08.2022

ಆದೇಶದಲ್ಲಿ ಗಣಕ ಯಂತ್ರಗಳು, ಮತ್ತು ಇನ್ನಿತರ ಸಾಮಾಗ್ರಿಗಳ ಸರಬರಾಜಗಾಗಿ ಲೆಕ್ಕ ಶೀರ್ಷಿಕೆ: 4202-01-201-1-06ಯ ಉಪ ಶೀರ್ಷಿಕೆ: 180 (ಯಂತ್ರೋಪಕರಣಗಳು ಮತ್ತು ಸಾಧನ ಸಾಮಾಗ್ರಿಗಳು) ಅಡಿಯಲ್ಲಿ ಒದಗಿಸಲಾದ ರೂ. 1500.00 ಲಕ್ಷಗಳಿಗೆ ಸಂಬಂಧಿಸಿದ ಕೆಳಕಂಡ ಕೋಷ್ಟಕ-01 ರಲ್ಲಿನ ಅನುಮೋದಿತ ಕ್ರಿಯಾ ಯೋಜನೆಯನ್ನು ಕೋಷ್ಟಕ-02 ರಲ್ಲಿನ ಕ್ರಿಯಾ ಯೋಜನೆಯಂತೆ ಪರಿಷ್ಕರಿಸಿ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

**ಕೋಷ್ಟಕ-01**

(ರೂ. ಲಕ್ಷಗಳಲ್ಲಿ)

| ಕ್ರ.ಸ | ವಿವರಗಳು | ಭೌತಿಕ | ಘಟಕವೆಚ್ಚ | ಒಟ್ಟು ಮೊತ್ತ |
|---|---|---|---|---|
| 1 | ಗಣಕಯಂತ್ರಗಳು | 2735 | 0.35 | 957.25 |
| 2 | ಲ್ಯಾಪ್ ಟಾಪ್ | 470 | 0.555 | 260.85 |
| 3 | ಪ್ರೊಜೆಕ್ಟರ್ | 380 | 0.32 | 121.60 |
| 4 | Site preparation | 229 | 0.7 | 160.30 |
| | **Total** | | | **1500.00** |

**ಕೋಷ್ಟಕ-02**

ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರು ದಿನಾಂಕ: 14.102.2022 ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ (T.A.P) ನಿರ್ಣಯದಂತೆ ಹೊಸದಾಗಿ ಅನುಮೋದನೆ ಕೋರಿ ಸಲ್ಲಿಸಿರುವ ಪ್ರಸ್ತಾವನೆ.

**ಪರಿಷ್ಕೃತ ಪ್ರಸ್ತಾವನೆ ವಿವರ:-**

(ರೂ. ಲಕ್ಷಗಳಲ್ಲಿ)

<table>
<tr><th colspan="2"></th><th>ಭೌತಿಕ</th><th>ಘಟಕ ವೆಚ್ಚ</th><th>ಒಟ್ಟು ಮೊತ್ತ</th></tr>
<tr><td colspan="2">A.I.C ಗಣಕಯಂತ್ರಗಳು</td><td>1795</td><td>0.45</td><td>807.75</td></tr>
<tr><td colspan="2">ಲ್ಯಾಪ್ ಟಾಪ್</td><td>508</td><td>0.40</td><td>203.20</td></tr>
<tr><td colspan="2">L.E.D ಪ್ರೊಜೆಕ್ಟರ್</td><td>247</td><td>0.63</td><td>155.61</td></tr>
<tr><td colspan="2">Interactive Panel Board</td><td>34</td><td>1.50</td><td>51.00</td></tr>
<tr><td rowspan="4">ಯು.ಪಿ.ಎಸ್ (195 ಶಾಲೆಗಳಿಗೆ)</td><td>(1KV(3PC),</td><td>58</td><td>0.25</td><td rowspan="4">146.64</td></tr>
<tr><td>2KV(6PC),</td><td>36</td><td>0.70</td></tr>
<tr><td>3KV(10PC),</td><td>92</td><td>1.03</td></tr>
<tr><td>5KV(20PC)</td><td>09</td><td>1.50</td></tr>
<tr><td colspan="2">Site preparation</td><td>194</td><td>0.70</td><td>135.80</td></tr>
<tr><td colspan="2">Total</td><td></td><td></td><td>1500.00</td></tr>
</table>

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 35 ಎಂಪಿಇ 2022,**

**ಬೆಂಗಳೂರು ದಿನಾಂಕ:25.01.2023**

2022-23ನೇ ಶೈಕ್ಷಣಿಕ ಸಾಲಿನ ಆಯ-ವ್ಯಯ ಅನುಮೋದನೆಯಂತೆ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಯಂತ್ರೋಪಕರಣಗಳು ಹಾಗೂ ಸಾಧನಾ ಸಾಮಗ್ರಿಗಳನ್ನು ಕೆಳಕಂಡ ವಿವರದಂತೆ ರೂ.1500.00 ಲಕ್ಷಗಳು (ಒಂದು ಸಾವಿರದ ಐನೂರು ಲಕ್ಷ ರೂಪಾಯಿಗಳು ಮಾತ್ರ) ಖರೀದಿಸಲು ಕೆಳಕಂಡ ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

**ಕ್ರಿಯಾ ಯೋಜನೆಯ ವಿವರ**

(ರೂ. ಲಕ್ಷಗಳಲ್ಲಿ)

<table>
<tr><th colspan="2">ವಿವರ</th><th>ಭೌತಿಕ</th><th>ಘಟಕವೆಚ್ಚ (ರೂ. ಲಕ್ಷಗಳಲ್ಲಿ)</th><th>ಒಟ್ಟುಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td colspan="2">Mini PCs</td><td>1795</td><td>0.45</td><td>807.75</td></tr>
<tr><td colspan="2">ಲ್ಯಾಪ್ ಟಾಪ್</td><td>508</td><td>0.40</td><td>203.20</td></tr>
<tr><td colspan="2">LED ಪ್ರೋಜೆಕ್ಟರ್</td><td>247</td><td>0.63</td><td>155.61</td></tr>
<tr><td colspan="2">Interactive Panel Board</td><td>34</td><td>1.50</td><td>51.00</td></tr>
<tr><td rowspan="4">ಯು.ಪಿ.ಎಸ್ (195 ಶಾಲೆಗಳಿಗೆ)</td><td>(1KV(3PC),</td><td>58</td><td>0.25</td><td rowspan="4">ಯು.ಪಿ.ಎಸ್ (195 ಶಾಲೆಗಳಿಗೆ)</td></tr>
<tr><td>2KV(6PC),</td><td>36</td><td>0.70</td></tr>
<tr><td>3KV(10PC),</td><td>92</td><td>1.03</td></tr>
<tr><td>5KV(20PC)</td><td>09</td><td>1.50</td></tr>
<tr><td colspan="2">Site preparation</td><td>194</td><td>0.70</td><td>135.80</td></tr>
<tr><td colspan="2">Total</td><td></td><td></td><td>1500.00</td></tr>
</table>

ಈ ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ: 4202-01-201-1-06-180 (ಯಂತ್ರೋಪಕರಣಗಳು ಮತ್ತು ಸಾಧನ ಸಾಮಾಗ್ರಿಗಳು) ರಡಿ ಒದಗಿಸಲಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು.

1. ಸದರಿ ಕಾರ್ಯಕ್ರಮವನ್ನು ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು, ಇವರು ಅನುಷ್ಠಾನಗೊಳಿತಕ್ಕದ್ದು.
2. ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಯಂತೋಪಕರಣಗಳು ಹಾಗೂ ಸಾಧನ ಸಾಮಾಗ್ರಿಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ರ ಪಾರದರ್ಶಕ ಕಾಯ್ದೆಯಡಿ ಇ-ಟೆಂಡರ್ ಮೂಲಕ ಜಿಲ್ಲಾ ಹಂತದಲ್ಲಿ ಸ್ಪರ್ಧಾತ್ಮಕ ಖರೀದಿ ವ್ಯವಸ್ಥೆ ಮೂಲಕ ಅನುಷ್ಠಾನಗೊಳಿಸತಕ್ಕದ್ದು.

3. ಈ ಸಂಬಂಧ ಬಿಡುಗಡೆಗೊಳಿಸಲಾದ ಅನುದಾನಕ್ಕೆ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು, ಇವರು ಸೂಕ್ತ ಲೆಕ್ಕ ಪತ್ರಗಳನ್ನು ಇಡತಕ್ಕದ್ದು.
4. ಒದಗಿಸಲಾದ ಅನುದಾನದ ಮಿತಿಯೊಳಗೆ ಹಾಗೂ ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನ ಕೋರದಂತೆ ಮತ್ತು ಅನುದಾನ ವ್ಯಪಗತವಾಗದಂತೆ, ಸದರಿ ಕಾರ್ಯಕ್ರಮವನ್ನು ಪ್ರಸಕ್ತ ಸಾಲಿನ ಅಂತ್ಯದೊಳಗೆ ಯಶಸ್ವಿಯಾಗಿ ಅನುಷ್ಠಾನಗೊಳಿಸತಕ್ಕದ್ದು.
5. ಸದರಿ ಉದ್ದೇಶಕ್ಕಾಗಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಈ ಹಿಂದೆ ಅನುದಾನ ಒದಗಿಸಲಾದ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೊರತುಪಡಿಸಿ, ಹೆಚ್ಚು ದಾಖಲಾತಿ ಹೊಂದಿರುವ ಹಾಗೂ ಮೂಲಭೂತ ಸೌಕರ್ಯ, ಗಣಕಯಂತ್ರಗಳು ಹಾಗೂ ಇನ್ನಿತರ ಸೌಲಭ್ಯಗಳು ಅಗತ್ಯವಿರುವ ಅರ್ಹ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆಯ್ಕೆ ಮಾಡಿ ಅನುದಾನ ಬಿಡುಗಡೆಗೊಳಿಸತಕ್ಕದ್ದು, ಯಾವುದೇ ಕಾರಣಕ್ಕೂ ಆಯ್ಕೆ ಸಂದರ್ಭದಲ್ಲಿ ಶಾಲೆಗಳು ಪುನರಾವರ್ತನೆಯಾಗದ ರೀತಿಯಲ್ಲಿ ಜಾಗೃತವಹಿಸತಕ್ಕದ್ದು.
6. ಉಪಕರಣ/ ಗಣಕಯಂತ್ರ ಇತ್ಯಾದಿ ಖರೀದಿಗೆ ಸಂಬಂಧಿಸಿದಂತೆ ಇ-ಆಡಳಿತ ಇಲಾಖೆಯು ಸೂಚಿಸಿರುವಂತೆ ಕ್ರಿಯಾ ಯೋಜನೆಗೆ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ (TAP) ಅನುಮೋದನೆಯಂತೆ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ನಿಯಮಗಳು ಹಾಗೂ ಅದರ ಅಡಿ ರಚಿತವಾಗಿರುವ ನಿಯಮಗಳನ್ನು ಹಾಗೂ ಕಾಲಕಾಲಕ್ಕೆ ಸರ್ಕಾರವು ಹೊರಡಿಸಿರುವ ಸುತ್ತೋಲೆ / ಆದೇಶ / ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ಸದರಿ ಕಾರ್ಯಕ್ರಮದ ಅನುಷ್ಠಾನದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳನ್ನು ಹೊಸ ಡಿಸಿಷನ್ ಸಪೋರ್ಟಿಂಗ್( New Decision Supporting System)(ಅವಲೋಕನ Portal) ನಲ್ಲಿ ಕಡ್ಡಾಯವಾಗಿ ಪ್ರತಿ ತಂಗಳು ಇಂದೀಕರಿಸತಕ್ಕದ್ದು ಹಾಗೂ ಈ ಬಗ್ಗೆ ಪ್ರತಿ ಮಾಹೆ ನಡೆಯುವ ಮಾಸಿಕೆ ಪ್ರಗತಿ ಪರಿಶೀಲನಾ MPIC) ಸಭೆಯಲ್ಲಿ ಪ್ರಗತಿಯ ವರದಿಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.
8. ಸರ್ಕಾರದ ಆದೇಶ ಸಂಖ್ಯೆ: ಇಪಿ 09 ಎಂಪಿಇ 2021, ದಿನಾಂಕ:04.04.2022 ರನ್ವಯ 2022-23ನೇ ಸಾಲಿನಲ್ಲಿ ಹಾಸನ ಜಿಲ್ಲೆ ವ್ಯಾಪ್ತಿಯಡಿ ಹೊಸದಾಗಿ ಐದು(05) ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಸದರಿ ಶಾಲೆಗಳಿಗೆ ತಲಾ 25.00 ಲಕ್ಷಗಳ ಅನುದಾನ ಮಂಜೂರು ಮಾಡಲಾಗಿರುವುದರಿಂದ ಸದರಿ ಶಾಲೆಗಳನ್ನು ಈ ಕ್ರಿಯಾ ಯೋಜನೆಯಲ್ಲಿ ಸೇರಿಸತಕ್ಕದ್ದಲ್ಲ.

ಸರ್ಕಾರದ ಆದೇಶ ಸಂಖ್ಯೆ: ಇಪಿ 35 ಎಂಪಿಇ 2022, ದಿನಾಂಕ:06.08.2022 ರಲ್ಲಿ 2022-23ನೇ ಸಾಲಿನಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಗಣಕ ಯಂತ್ರಗಳು ಮತ್ತು ಇನ್ನಿತರ ಸಾಮಾಗ್ರಿಗಳ ಸರಬರಾಜಗಾಗಿ ಲೆಕ್ಕ ಶೀರ್ಷಿಕೆ: 4202-01-201-1-06ಯ ಉಪ ಶೀರ್ಷಿಕೆ: 180 (ಯಂತ್ರೋಪಕರಣಗಳು ಮತ್ತು ಸಾಧನ ಸಾಮಾಗ್ರಿಗಳು) ಅಡಿಯಲ್ಲಿ ಒದಗಿಸಲಾದ ರೂ.1500.00 ಲಕ್ಷಗಳಿಗೆ ಮಾತ್ರ

25/1/23

ಸಂಬಂಧಿಸಿದಂತೆ ಈಗಾಗಲೇ ಅನುಮೋದನೆ ನೀಡಲಾದ ಕ್ರಿಯಾಯೋಜನೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಕೈಬಿಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 892 ವೆಚ್ಚ 8/2022 ದಿನಾಂಕ:19.12.2022 ರಲ್ಲಿ ಮತ್ತು ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ.01/2023 ರಲ್ಲಿನ ಅನುಮೋದನೆಯಂತೆ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2022 ದಿನಾಂಕ:03.01.2023ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

25/1/23

(ಬಿ.ಹೆಚ್ ಗಿರಿಜಾ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

ಇವರಿಗೆ;

1. ಮಹಾಲೇಖಪಾಲರು, ( ಆಡಿಟ್ 1 ಮತ್ತು 2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
4. ನಿರ್ದೇಶಕರು, (ಪ್ರಾಥಮಿಕ/ಪ್ರೌಢ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
6. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, #49, ಖನಿಜ ಭವನ, ಬೆಂಗಳೂರು.
7. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು-ಪ್ರಕರಣ ಸಂಖ್ಯೆ:ಸಿ.01/2023
9. ಸರ್ಕಾರದ ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಕರ್ನಾಟಕ ರಾಜ್ಯ ಪತ್ರ/ಶಾಖಾರಕ್ಷಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ.**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು.